ಕ್ರ. ಸಂ	ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಿರುವ ಸ್ಥಳ ಮತ್ತು ವಿಳಾಸ	ಸ್ವತಂತ್ರ/ ಸಂಯುಕ್ತ	ಭಾಷಾ ವಿಷಯ ಮತ್ತು ಸಂಯೋಜನೆ	ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ
ಗದಗ್ ಜಿಲ್ಲೆ				
141	ಚಿಕ್ಕನರಗುಂದ, ಗದಗ್ ಜಿಲ್ಲೆ	ಸಂಯುಕ್ತ	0102 21222829	34
142	ಹೊಳೆಇಟಗಿ ಶಿರಹಟ್ಟಿ ತಾಲ್ಲೂಕು, ಗದಗ್ ಜಿಲ್ಲೆ	ಸ್ವತಂತ್ರ	0102 21222829	77
143	ಕಡಕೋಳ ಶಿರಹಟ್ಟಿ ತಾಲ್ಲೂಕು, ಗದಗ್ ಜಿಲ್ಲೆ	ಸಂಯುಕ್ತ	0102 21222829	51
144	ಗಜೇಂದ್ರಗಡ, ರೋಣ ತಾಲ್ಲೂಕು, ಗದಗ್ ಜಿಲ್ಲೆ	ಸಂಯುಕ್ತ	0102 21222429	111
145	ಸೊರಟೂರು, ಗದಗ್ ತಾಲ್ಲೂಕು ಮತ್ತು ಜಿಲ್ಲೆ	ಸಂಯುಕ್ತ	0102 21222829	31
ಉತ್ತರ ಕನ್ನಡ ಜಿಲ್ಲೆ				
146	ಹಿರೇಗುತ್ತಿ ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ	ಸ್ವತಂತ್ರ	0102 21222829	30
147	ಬನವಾಸಿ, ಉತ್ತರ ಕನ್ನಡ ಜಿಲ್ಲೆ	ಸ್ವತಂತ್ರ	0102 21222829	66

1007 (1048) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು),

ಆ) ಈ ಮನೆಗಳಲ್ಲಿ ಎಷ್ಟು ಮನೆಗಳನ್ನು ಫಲಾನುಭವಿಗಳ ಸ್ವಾಧೀನಕ್ಕೆ ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು),

ಇ) ಪ್ರತಿ ಮನೆಗಳ ನಿರ್ಮಾಣದ ವೆಚ್ಚ ಎಷ್ಟು,

ಈ) ಇದರಲ್ಲಿ, ಫಲಾನುಭವಿಗಳ ಪಾಲು ಎಷ್ಟು, ವಿವರ ನೀಡುವುದು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಮತ್ತು ಆ) 2006–07ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ ಸರ್ಕಾರವು ಪ್ರತಿ ಗ್ರಾಮ ಪಂಚಾಯಿತಿಗೆ 60 ಮನೆಗಳಂತೆ ಹಾಗೂ 10000 ಕ್ಕಿಂತ ಹೆಚ್ಚಿಗೆ ಜನಸಂಖ್ಯೆಯಿರುವ ಪ್ರತಿ ಗ್ರಾಮ ಪಂಚಾಯ್ತಿಗೆ ಹೆಚ್ಚುವರಿಯಾಗಿ 60 ಮನೆಗಳಂತೆ ಒಟ್ಟು 340560 ಮನೆಗಳನ್ನು ನೀಡಲಾಗಿದ್ದು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ನಗರ ಆಶ್ರಯ ಯೋಜನೆಯಡಿ 2006–07ನೇ ಸಾಲಿಗೆ ಇನ್ನೂ ಸರ್ಕಾರ ಗುರಿಯನ್ನು ನಿಗದಿಪಡಿಸಿರುವುದಿಲ್ಲ

ಇ) ಗ್ರಾಮೀಣ ಆಶ್ರಯ ಯೋಜನೆಯಡಿ ಪ್ರತಿ ಮನೆಗೆ 2005–06ನೇ ಸಾಲಿನಲ್ಲಿ ರೂ 20000/– ಇದ್ದು, ಇದನ್ನು ರೂ 20000 ರಿಂದ ರೂ 25,000/– ಕ್ಕೆ ಹಾಗೂ 2006–07ನೇ ಸಾಲಿನಲ್ಲಿ ರೂ 25,000/– ದಿಂದ ರೂ 30,000/– ಕ್ಕೆ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ ನಗರ ಆಶ್ರಯ ಯೋಜನೆಯಡಿಯಲ್ಲಿ ಸಧ್ಯಕ್ಕೆ ರೂ 25000/–ವನ್ನು ಸಾಲದ ರೂಪದಲ್ಲಿ ನೀಡುತ್ತಿದ್ದು ಈ ಸಾಲದ ಅನುದಾನವನ್ನು ಹೆಚ್ಚಿಸುವ ವಿಷಯವು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ

ಈ) ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ನೀಡಲಾಗುವ ಅನುದಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ 100% ಸಹಾಯಧನವಾಗಿರುತ್ತದೆ ಹಾಗೂ ಸಾಮಾನ್ಯ ವರ್ಗದವರಿಗೆ ಶೇಕಡಾ 50% ಸಹಾಯಧನ, ಶೇಕಡಾ 50% ಸಾಲದ ರೂಪದಲ್ಲಿ ಇರುತ್ತದೆ ನಗರ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿಕೊಂಡಲ್ಲಿ ಸಾಲದ ರೂಪದಲ್ಲಿ ನೀಡಲಾಗುವ ಅನುದಾನವನ್ನು ಮೂರು ಅಥವಾ ನಾಲ್ಕು ಹಂತಗಳಲ್ಲಿ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಬಿಡುಗಡೆಗೊಳಿಸಲಾಗುತ್ತದೆ

ನಗರ ಆಶ್ರಯ ಯೋಜನೆಯಡಿಯಲ್ಲಿ ಒಂದು ವೇಳೆ ಫಲಾನುಭವಿಗಳು ಮನೆಗಳನ್ನು ನಿರ್ಮಾಣ ಸಂಸ್ಥೆಗಳ ವತಿಯಿಂದ ನಿರ್ಮಿಸಲು ಇಚ್ಛಿಸಿದಲ್ಲಿ ಮನೆಯ ಅಂದಾಜು ವೆಚ್ಚದಲ್ಲಿ ಸಾಲದ ರೂಪದಲ್ಲಿ ನೀಡಲಾಗುತ್ತಿರುವ ರೂ 25,000/– ವನ್ನು ಕಳೆದು, ಉಳಿದ ಮೊತ್ತವನ್ನು

ಫಲಾನುಭವಿಗಳು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಮುಂಗಡವಾಗಿ ನೀಡಬೇಕಾಗಿರುತ್ತದೆ

1008 (1040) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿವಮೊಗ್ಗ ತಾಲ್ಲೂಕು ಆಯನೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ,

ಆ) ಇದ್ದಲ್ಲಿ, ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಆಯನೂರಿನಲ್ಲಿ ಕಲಾ ಮತ್ತು ವಾಣಿಜ್ಯ ಸರ್ಕಾರಿ ಕಾಲೇಜನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತಿದೆ

ಇ) ಮೇಲಿನಂತೆ

1009 (1041) ಶ್ರೀ ಹಾಲಪ್ಪ ಹೆಚ್ (ಹೊಸನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸುವರ್ಣ ಗ್ರಾಮ ಯೋಜನೆಯನ್ನು ಗ್ರಾಮಗಳ ಜನಸಂಖ್ಯೆ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆಯೇ,

ಆ) ಮಲೆನಾಡಿನಲ್ಲಿ ಕಡಿಮೆ ಜನಸಂಖ್ಯೆ ಆಧಾರದ ಮೇಲೆ ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಇವುಗಳನ್ನು ಯಾವ ರೀತಿ ಅಭಿವೃದ್ಧಿ ಪಡಿಸಲಾಗಿದೆ,

ಇ) ಉಳಿದ ಗ್ರಾಮಗಳನ್ನು (ಮಜಿರ) ಯಾವಾಗ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಹೌದು

ಆ) ಇನ್ನೂ ಅಭಿವೃದ್ಧಿ ಕಾರ್ಯಕ್ರಮ ಆರಂಭವಾಗಿರುವುದಿಲ್ಲ